**SC No. 155/2023**
**PW-4**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 155/2023

| | | |
|---|---|---|
| ಸಾಕ್ಷಿದಾರರ ಹೆಸರು | ಪುನೀತ್ ಪಿ.ವಿ | ಪ್ರಮಾಣ ವಚನ ಮಾಡಿದ ದಿನಾಂಕ: 04.03.2026 |
| ತಂದೆಯ/ಗಂಡನ ಹೆಸರು | ವೆಂಕಟೇಶ್ | |
| ವಯಸ್ಸು | 32 ವರ್ಷ | |
| ವೃತ್ತಿ | ಆಟೋ ಡ್ರೈವರ್ | ಪ್ರಾ.ಸಾಃ 04 |
| ವಾಸ ಸ್ಥಳ | ಮೈಸೂರು | ಚಾ.ಸಾಃ 03 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನಗೆ ಚಾಸಾ–2 ಸುರೇಶ್ ಗೊತ್ತಿರುವುದಿಲ್ಲ. ಅಲ್ಲದೇ ಇತರೆ ಪೊಲೀಸ್ ಸಿಬ್ಬಂದಿಯವರು ಸಹ ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದಾಳಿ ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದಾಳಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.4 (ಎಫ್ ) ಎಂದು ಗುರುತಿಸಲಾಯಿತು. ನಿಪಿ–4 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಸುಮಾರು 9 ವರ್ಷಗಳ ಹಿಂದೆ ವಿವೇಕಾನಂದ ಸರ್ಕಲ್ ನಲ್ಲಿ ಇರುವ ಬೀಡಾ ಸ್ಟಾಲ್ ಹತ್ತಿರ ಸಹಿ ಮಾಡಿದ್ದೆ ನನ್ನ ಸಮಕ್ಷಮ

ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರಲಿಲ್ಲ. ಪೊಲೀಸರು ಮನೆ ನಂಬರ್ ಸಿ 71 ರಲ್ಲಿನ 1 ನೇ ಮಹಡಿಯಲ್ಲಿ ಇರುವ ಅಲಂಕಾರ್ ಫ್ಯಾಮಿಲಿ ಸಲೂನ್ ಮತ್ತು ಟ್ಯಾಮಸ್ ಹೆಸರಿನ ಅಂಗಡಿಯಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರಲಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ. ನಾನು ಈಗ ನೋಡುತ್ತಿರುವ ವಸ್ತುಗಳನ್ನು ಈ ಹಿಂದೆ ನೋಡಿರುವುದಿಲ್ಲ. ಸಾಕ್ಷಿದಾರರು ನೋಡಿ ಹೇಳಿದಂತಹ ವಸ್ತುಗಳನ್ನು ಈಗಾಗಲೇ ಎಂ.ಒ 1 ರಿಂದ 7 ಎಂದು ಗುರುತಿಸಲ್ಪಟ್ಟಿರುತ್ತವೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 19.06.2015 ರಂದು ಮಧ್ಯಾಹ್ನ 1.15 ಗಂಟೆಗೆ ನಾನು ಮತ್ತು ಸುರೇಶ್ ಕುವೆಂಪುನಗರ ಪೊಲೀಸ್ ಠಾಣೆಯ ಮುಂದೆ ಹೋಗುತ್ತಿರುವಾಗ ನಮ್ಮನ್ನು ಕರೆದು KSRTC ಡಿಪೋ ಹತ್ತಿರ ಇರುವ ಮನೆ ನಂಬರ್ ಸಿ71 ರಲ್ಲಿ 1 ನೇ ಮಹಡಿಯಲ್ಲಿ ಇರುವ ಅಲಂಕಾರ್ ಫ್ಯಾಮಿಲಿ ಸಲೂನ್ ಮತ್ತು ಟ್ಯಾಮಸ್ ಹೆಸರಿನ ಅಂಗಡಿಯಲ್ಲಿ ವೇಶ್ಯವಾಟಿಕೆ ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದು ಮಾಹಿತಿ ತಿಳಿಸಿ ಪಂಚರಾಗುವಂತೆ ಕೇಳಿಕೊಂಡಿದ್ದು ಅದಕ್ಕೆ ನಾನು ಒಪ್ಪಿದ್ದು ಮಧ್ಯಾಹ್ನ 1.30 ಗಂಟೆಗೆ ಠಾಣೆ

ಬಿಟ್ಟು 1.45 ಗಂಟೆಗೆ ಹೋಗಿ ನೋಡಲಾಗಿ ಅಲ್ಲಿ ಆ ಅಂಗಡಿಯ ಮಾಲೀಕ ರಂಗಪ್ಪ ಅಂತ ಇದ್ದು ಆತನಿಗೆ ಪರವಾನಿಗೆ ಹಾಜರುಪಡಿಸುವಂತೆ ಸೂಚಿಸಿದಾಗ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದ್ದ. ಅಂಗಡಿ ಪ್ರವೇಶಿಸಿ ಪರಿಶೀಲಿಸಲಾಗಿ ಆ ಅಂಗಡಿಯಲ್ಲಿ ಎರಡು ಭಾಗಗಳು ಇದ್ದು ಪ್ರತಿಯೊಂದು ಭಾಗದಲ್ಲೂ ಪ್ರತ್ಯೇಕ 3 ಕಬೋರ್ಡ್ ನಿಂದ ಮಾಡಿದ ಒಟ್ಟು 6 ರೂಂಗಳು ಇದ್ದು ಮೊದಲ ರೂಂಗೆ ಪ್ರವೇಶಿಸಿದ್ದು 2 ನೇ ಭಾಗದ ಬಾಗಿಲಿನಿಂದ ಸುಮಾರು 25-28 ವರ್ಷದ ವ್ಯಕ್ತಿ ತಪ್ಪಿಸಿಕೊಂಡು ಹೋಗಿದ್ದ ನಂತರ ಮೊದಲನೇ ಭಾಗದ 3 ನೇ ರೂಂಗೆ ಹೋಗಿ ನೋಡಲಾಗಿ ರೂಂ ನ ನೆಲದ ಮೇಲೆ ಹಸಿರು ಬಣ್ಣದ ಟವಲ್ ಹಾಸಿ ಎರಡು ಕಪ್ಪು ಬಣ್ಣದ ತಲೆದಿಂಬುಗಳನ್ನು ಒಂದರ ಮೇಲೆ ಒಂದರಂತೆ ಇಟ್ಟಿದ್ದು ರೂಂನಲ್ಲಿ ಒಬ್ಬ ಹೆಂಗಸ ಅಸ್ತವ್ಯಸ್ತವಾಗಿದ್ದ ಬಟ್ಟೆಗಳನ್ನು ಸರಿಪಡಿಸಿಕೊಳ್ಳುತಿದ್ದು ಆ ಜಾಗದಲ್ಲಿ ಬಳಕೆ ಮಾಡಿದ್ದ ಎರಡು ನಿರೋದ್ ಗಳು ಇದ್ದು ವಿಚಾರಿಸಲಾಗಿ ಕಾವ್ಯ ಕೋಂ ರಂಜೇಶ್, ಶಾರದದೇವಿನಗರ ಮೈಸೂರು ಎಂದು ತಿಳಿಸಿದ್ದು ಓಡಿಹೋದವನ ಬಗ್ಗೆ ಕೇಳಲಾಗಿ ತಿಳಿದಿಲ್ಲವೆಂದು ಹೇಳಿದ್ದು. 3 ನೇ ಕಾಬೋರ್ಡ್ ರೂಂಗೆ ಹೋಗಿ ಪರಿಶೀಲಿಸಲಾಗಿ ಸುಮಾರು 26-28 ವರ್ಷದ ಮಹಿಳೆ ಮತ್ತು ಸುಮಾರು 30-32 ವರ್ಷದ ಗಂಡಸು ಇದ್ದು ವಿಚಾರಿಸಲಾಗಿ ನೀತು ಶೆಟ್ಟಿ ಬಿನ್ ತಿಮ್ಮ ಶೆಟ್ಟಿ ಕನಕದಾಸ ನಗರ ಮೈಸೂರು ಎಂದು ತಿಳಿಸಿದ್ದು ಮತ್ತೊಬ್ಬ ಅನಿಲ್ ಕುಮಾರ್ ತಂದೆ ಲೇಟ್ ಗೋಪಾಲ್ ಕುವೆಂಪುನಗರ ಎಂದು ತಿಳಿಸಿದ್ದು ನೀತು ಶೆಟ್ಟಿ ಗಿರಾಕಿಗಳಿಗಾಗಿ

ಕಾಯುತ್ತಿರುವುದಾಗಿ ತಿಳಿಸಿದ್ದು ಅಂಗಡಿ ಮಾಲೀಕ ಹರ್ಷ ಹಾಗೂ ಈತನ ತಂದೆ ರಂಗಪ್ಪ ಮತ್ತು ಅರುಣ್ ಕುಮಾರ್ ರವರುಗಳು ಗಿರಾಕಿಗಳನ್ನು ಕರೆತರುವುದಾಗಿ ತಿಳಿಸಿದ್ದು ಅಲ್ಲಿ ದೊರೆತ ಎಂ.ಒ–1 ರಿಂದ 7 ಅನ್ನು ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ಮಧ್ಯಾಹ್ನ 2.00 ರಿಂದ 3.00 ಪಂಚನಾಮೆ ಬರೆದು ನನ್ನ ಸಹಿ ತೆಗೆದುಕೊಂಡಿತ್ತು ಎಂದರೆ ಸರಿಯಲ್ಲ. ಅದರಂತೆ ಈಗ ಓದಿ ಹೇಳಿದ **ನಿಪಿ–9** ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಆ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**